ಸರ್ಕಾರಿ ನೌಕರರನು ಕಡಿಮೆ ವೇತನ ಶ್ರೇಣಿಯಿಂದ ಹೆಚ್ಚಿನ ವೇತನ ಶ್ರೇಣಿಗೆ ನೇಮಕ ಗೊಂಡಾಗ ಅವರ ವಾರ್ಷಿಕ ಬಡ್ತಿ ದಿನಾಂಕವನ್ನು ರಕ್ಷಿಸುವ ಬಗ್ಗೆ

೧೧೧೦. ಶ್ರೀ ಗೋಪಾಲ ಪುಂಕಂದ ಕಾನಡೆ (ಸಿರ್ಸಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಮುಖ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರಿ ಸೇವಾ ನಿಯಮ ೪೧–ಎ ನಲ್ಲಿನ ಈಗಿರುವ ನಿಯಮಗಳ ಪ್ರಕಾರ ಕಡಿಮೆ ವೇತನ ಶ್ರೇಣಿಯಿಂದ ಹೆಚ್ಚಿನ ವೇತನ ಶ್ರೇಣಿಯ ಹುದ್ದೆಗೆ ನೇಮಕವಾದ ಸರ್ಕಾರಿ ನೌಕರರಿಗೆ ವಾರ್ಷಿಕ ಬಡ್ತಿ ರಕ್ಷಣೆ ದೊರಕದೆ ಅನ್ಯಾಯವಾಗುತ್ತಿರುವುದರಿಂದ ಈ ನಿಯಮವನ್ನು ತಿದ್ದುಪಡಿ ಮಾಡುವ ಬಗ್ಗೆ ಸರ್ಕಾರಕ್ಕೆ ಮನವಿಗಳು ಬಂದಿವೆಯೆ?

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಯಾವ ಕ್ರಮ ಕೈಕೊಂಡಿದ್ದಾರೆ?

ಇ) ಹಾಗಿಲ್ಲದಿದ್ದಲ್ಲಿ, ಇದರಿಂದ ಅನೇಕ ವರ್ಷ ಸೇವೆ ಸಲ್ಲಿಸಿ ಕಡಿಮೆ ವೇತನ ಶ್ರೇಣಿಯ ಹುದ್ದೆಯಿಂದ ಹೆಚ್ಚಿನ ವೇತನ ಶ್ರೇಣಿಯ ಹುದ್ದೆಗಳಿಗೆ ನೇಮಕವಾಗಿರುವ ನೌಕರರಿಗೆ ಅನ್ಯಾಯವಾಗುವುದಿಲ್ಲವೆ?

ಈ) ಇಂತಹ ನೌಕರರಿಗೆ ವಾರ್ಷಿಕ ಬಡ್ತಿ ವೇತನವನ್ನು ದಿನಾಂಕ ೨೦–೭–೭೮ರವರೆಗೆ ರಕ್ಷಿಸುತ್ತಿದ್ದುದು ನಿಜವೇ ಮತ್ತು ದಿನಾಂಕ ೨೦–೭–೭೮ರ ನಂತರ ಕೈ ಬಿಡಲು ಮುಖ್ಯ ಕಾರಣಗಳೇನು? ಈ ತಾರತಮ್ಯವನ್ನು ಎಷ್ಟು ಸಮಯದೊಳಗೆ ಸರಿಪಡಿಸಲಾಗುವುದು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಹೌದು.

ಆ, ಇ ಮತ್ತು ಈ) ಕೆಳ ದರ್ಜೆ ವೇತನ ಶ್ರೇಣಿಯ ಹುದ್ದೆಯಲ್ಲಿ ಸಲ್ಲಿಸಿದ ಸೇವೆಯನ್ನು ವಾರ್ಷಿಕ ವೇತನ ಬಡ್ತಿಯ ಗಳಿಕೆಗಾಗಿ ಹೆಚ್ಚಿನವೇತನ ಶ್ರೇಣಿಯ ಹುದ್ದೆಯಲ್ಲಿ ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಈ ಸ್ಥಿತಿಯನ್ನು ಸುಸ್ಪಷ್ಟಗೊಳಿಸಲು ಸಲುವಾಗಿ, ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ ನಿಯಮ ೪೧–ಎ ಅನ್ನು ದಿನಾಂಕ ೨೦–೭–೧೯೭೮ರಿಂದ ತಿದ್ದುಪಡಿ ಮಾಡಲಾಗಿದೆ. ಈಗಿರುವ ನಿಯಮಗಳಲ್ಲಿ ಯಾವುದೇ ತಾರತಮ್ಯವಿಲ್ಲ. ಆದ್ದರಿಂದ ಅದನ್ನು ಸರಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಭದ್ರಾವತಿ ಉಚ್ಚುಕಟ್ಟಿನ ಅಭಿವೃದ್ಧಿ ಮತ್ತು 'ಕಾಡಾ' ಗ್ರಾಂಟ್ ಬಗ್ಗೆ

೯೮೬. ಶ್ರೀ ಬಿ. ಕೊಟ್ರಪ್ಪ (ಹರಿಹರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ?

ಅ) ಭದ್ರಾ ಉಚ್ಚುಕಟ್ಟಿನ ಅಭಿವೃದ್ಧಿ ಮತ್ತು 'ಕಾಡಾ' ಗ್ರಾಂಟ್ ಬಗ್ಗೆ ಹೆಚ್ಚಿನ ಹಣ ಮಂಜೂರು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಪರಿಶೀಲನೆಯಲ್ಲಿದೆ.

ಸವಂದ್ರು ಕೊರೆತ ತಡೆಗಟ್ಟಲು ವ್ಯವಸ್ಥೆ ಮಾಡುವ ಬಗ್ಗೆ

೬೫೯. ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕಿನ ಕರ್ಕಿ ಗ್ರಾಮದ ರಾಮೇಶ್ವರ ಕಂಬಿಯಿಂದ ಶಿಡಕುಳಿವರೆಗೆ ಸಮುದ್ರ ಕೊರೆತ ತಡೆಗಟ್ಟಲು ವ್ಯವಸ್ಥೆ ಮಾಡುವ ಬಗ್ಗೆ ಈ ಹಿಂದೆ ಸರ್ವೆ ಆಗಿರುವುದು ನಿಜವೆ? ಹಾಗಿದ್ದಲ್ಲಿ, ಎಷ್ಟು ಖರ್ಚಾಗುವುದೆಂದು ಅಂದಾಜು ಮಾಡಲಾಗಿದೆ?

ಆ) ಈ ಕೆಲಸ ಕೈಗೆತ್ತುಕೊಳ್ಳುವುದರ ಬಗ್ಗೆ ಸರ್ಕಾರವು ನಿರ್ಧರಿಸಿತೋ, ಹಾಗಿದ್ದಲ್ಲಿ ಯಾವಾಗ?